# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1109
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಏಕೀಕರಣದ ಮೊದಲು ಮದ್ರಾಸ್ ಪ್ರಾಂತ್ಯದ ಭಾಗವಾಗಿದ್ದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಾಜ್ಯದ ಜನವಸತಿ ಪ್ರದೇಶ, ಖಾಸಗಿ ಸಂಪರ್ಕ ರಸ್ತೆ, ಮೂಲಗೇಣಿ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುವ ಬಗ್ಗೆ ಇಲಾಖೆಯ ಗಮನಕ್ಕೆ ಈಗಾಗಲೇ ತರಲಾಗಿದ್ದು ಇವುಗಳ ಪರಿಹಾರಕ್ಕಾಗಿ ಕಾಲಮಿತಿಯನ್ನು ನಿಗದಿಪಡಿಸಿ ಯಾವ ರೀತಿಯಲ್ಲಿ ಕಾರ್ಯತಂತ್ರ ರೂಪಿಸಿದೆ: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮೂಲಗೇಣಿ, ಖಾಸಗಿ ಸಂಪರ್ಕ ರಸ್ತೆ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುತ್ತದೆ. ರಸ್ತೆ ತಕರಾರು ಬಗ್ಗೆ ಸರ್ಕಾದ ಸುತ್ತೋಲೆ ಸಂಖ್ಯೆ: ಆರ್‌ಡಿ 23 ಎಲ್‌ಜಿಪಿ 2022, ದಿನಾಂಕ: 20.10.2023 ಕೈಗೊಳ್ಳಲಾಗುತ್ತಿದೆ.<br>ಮೂಲ ಗೇಣಿ ಪ್ರಕರಣದ ಕುರಿತು ನ್ಯಾಯಾಲಯದಲ್ಲಿ WA 726/2023 ರಂತೆ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದು, ನ್ಯಾಯಾಲಯದ ಆದೇಶದನ್ವಯ ಕ್ರಮ ಕೈಗೊಳ್ಳಲಾಗುವುದು. |
| (ಆ) | ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಸಾಮಾಜಿಕವಾಗಿ ಶೋಷಿತ ಜನರಿಗೆ ಡಿಪ್ರೆಸ್ಸೆಡ್ ಕ್ಲಾಸ್ ಮಾನದಂಡದಡಿ ಯಾವ್ಯಾವ ಸಮುದಾಯಗಳ ಎಷ್ಟು ಜನರಿಗೆ ಭೂಮಂಜೂರಾತಿ ಮಾಡಲಾಗಿದೆ: ಅವುಗಳು ಸದ್ರಿ ಸಮುದಾಯಗಳ ಸ್ವಾಧೀನದಲ್ಲಿವೆಯೇ: ಡಿಸಿ ಮನ್ನಾ ಜಮೀನುಗಳನ್ನು ಭೂ ಸುಧಾರಣೆ ಕಾಯ್ದೆಯಡಿ ಇತರರು ಸ್ವಾಧೀನಪಡಿಸಲು ಅವಕಾಶವಿದೆಯೇ: | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಟ್ಟು 12668 ಪ್ರಕರಣಗಳಲ್ಲಿ 6478.485 ಎಕರೆ ಜಮೀನನ್ನು ಮತ್ತು ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಟ್ಟು 3802 ಪ್ರಕರಣಗಳಲ್ಲಿ 4184.94 ಎಕ್ರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.<br><br>ಈ ಹಿಂದಿನ ಮದ್ರಾಸು ಪ್ರಾಂತ್ಯಕ್ಕೆ ಒಳಪಟ್ಟ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿ.ಸಿ ಮನ್ನಾ ಜಮೀನು ಎಂಬ ಪರಿಕಲ್ಪನೆಯಿದ್ದು, ಈ ಹಿಂದೆ Standing Orders of the Board of Revenue of the erstwhile provinces of Madras ನಂತೆ Depressed Class ವರ್ಗದವರಿಗಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ " DC Manna Land" ಗುರುತಿಸಿ ಮೀಸಲಿರಿಸಿದ್ದು, ಅಡಂಗಲ್‌ನಲ್ಲಿ ಡಿಸಿ ಮನ್ನಾ ಎಂದು ಇರುವ ನಮೂದನ್ನು ಆಧರಿಸಿ ಕರ್ನಾಟಕ ಭೂಕಂದಾಯ ಅಧಿನಿಯಮ-1964 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮ-1969 ಜಾರಿಗೆ ಬಂದ ನಂತರ ಪಹಣಿ ಪತ್ರಿಕೆಯ ಕಲಂ-11 ರಲ್ಲಿ DC Manna Land ಎಂದು ಮಾಡಿರುವುದಾಗಿದೆ. ಸದರಿ ಜಮೀನುಗಳ ಮಂಜೂರಾತಿ ಕುರಿತು ಕೈಗೊಳ್ಳಬೇಕಾದ |

| | | |
|---|---|---|
| | | ಕ್ರಮಗಳನ್ನು Standing Orders of the Board of Revenue 38 d ಈ ರೀತಿ ಉಲ್ಲೇಖಿಸಲಾಗಿರುತ್ತದೆ:-<br>"RESERVATION OF LAND FOR Assignment to depressed Classes:-<br>In the case of villages which contain a considerable extent of land available for occupation, the Divisional Officer should, and in all other villages, he may, if he thinks it's necessary in the interest of the depressed classes, set apart a specific area for assignment for cultivation to the depressed classes.<br><br>ಆದುದರಿಂದ ಸದರಿ ಡಿ.ಸಿ ಮನ್ನಾ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹೊರತುಪಡಿಸಿ ಇತರರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| (ಇ) | ಖಾಸಗಿ ಕೃಷಿ ಜಮೀನಿನಲ್ಲಿರುವ ರಸ್ತೆ ಜಾಗಗಳನ್ನು ಹಸ್ತಾಂತರಿಸಿಕೊಳ್ಳಬಾರದೆಂದು 30/09/2020ರ ನಗರಾಭಿವೃದ್ಧಿ ಸುತ್ತೋಲೆಯಲ್ಲಿ ತಿಳಿಸಿದ್ದು ಹಸ್ತಾಂತರಿಸಿಕೊಳ್ಳಲು ಅನುಸರಿಸಬೇಕಾದ ನಿಯಮಗಳನ್ನು ಕಂದಾಯ ಇಲಾಖೆ ರೂಪಿಸಿದೆಯೇ; ಒಂದು ಸಲಕ್ಕೆ ಖಾಸಗಿ ರಸ್ತೆಯ ಜಾಗವನ್ನು ಹಸ್ತಾಂತರ ಮಾಡಲು ಅವಕಾಶ ನೀಡಿ ಸಮಸ್ಯೆಯನ್ನು ಪರಿಹರಿಸಲು ಇಲಾಖೆ ಯಾವಾಗ ಕ್ರಮವಹಿಸುವುದು; | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 59 ರಲ್ಲಿ 'ದಾರಿಯ ಹಕ್ಕುಗಳು ಮತ್ತು ಇತರೆ ಅನುಭೋಗದ ಹಕ್ಕುಗಳ' ಬಗ್ಗೆ ತಿಳಿಸಲಾಗಿದ್ದು, ಸಂಬಂಧಪಟ್ಟ ಜಮೀನುಗಳ ಭಾಗಿದಾರರು ಒಪ್ಪಿರುವಂತಹ ಸಂದರ್ಭದಲ್ಲಿ ಹಕ್ಕುಗಳ ದಾಖಲೆ ರಿಜಿಸ್ಟರ್‌ನಲ್ಲಿ ನಮೂದು ಮಾಡಲು ಅವಕಾಶವಿದೆ. |
| (ಈ) | ರಾಜ್ಯದಲ್ಲಿ ಭೂಮಿಯ ಖಾತೆದಾರರನ್ನು ನಿಗದಿತ ಗುರುತಿನ ಚೀಟಿಗೆ ಲಿಂಕ್ ಮಾಡಿ ಮತ್ತು ದಾಖಲೆಗಳ ಮೂಲಕ ತಾನು ಹೊಂದಿರುವ ಜಾಗವನ್ನು ಹೊರತುಪಡಿಸಿ ಇತರ ಜಾಗವನ್ನು ಅನಧಿಕೃತವಾಗಿ ಸ್ವಾಧೀನಪಡಿಸಲು ಸಾಧ್ಯವಾಗದ ರೀತಿಯಲ್ಲಿ ವೈಜ್ಞಾನಿಕವಾಗಿ "ಲ್ಯಾಂಡ್ ಆಡಿಟ್" ಮಾಡುವ ಬಗ್ಗೆ ಸರಕಾರದ ನಿಲುವೇನು? | ಪ್ರಸ್ತುತ ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಕಾರ್ಯವು ಚಾಲ್ತಿಯಲ್ಲಿದ್ದು, ಸದರಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಆಧಾರ್ ಮಾಹಿತಿಯನ್ನು ಭೂಮಿ ಮತ್ತು ಕಾವೇರಿ ತಂತ್ರಾಂಶಗಳಲ್ಲಿ ಬಳಸುವ ಸಂಬಂಧ ತೀರ್ಮಾನಿಸಿ ಕ್ರಮವಹಿಸಲಾಗುವುದು. |

(ಕಡತ ಸಂಖ್ಯೆ:ಆರ್‌ಡಿ 114 ಎಲ್‌ಜಿಎ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು